ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್ ಸೈಟ್:w.w.w.kptcl.com
ಇ-ಮೇಲ್:dgmtkptcl@rediffmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number(CIN):U40109KA1999SGC025521

ನಂ:B19/7654/84-85
ಲಗತ್ತು:

ನಿಗಮ ಕಾರ್ಯಾಲಯ,
ಕಾವೇರಿ ಭವನ
ಬೆಂಗಳೂರು-560009.
ದಿನಾಂಕ:29.01.2019

30 JAN 2019

ಎಲ್ಲಾ ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ, ಕವಿಪ್ರನಿನಿ.

ಮಾನ್ಯರೇ,

ವಿಷಯ: ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಕಾಮಗಾರಿಯಲ್ಲಿ ತೆರವುಗೊಳಿಸುವ/ ಹಾನಿಗೊಳಗಾಗಿರುವ ಮರ/ಗಿಡ/ಬೆಳೆಗಳಿಗೆ ಪರಿಹಾರ ನಿಗದಿಪಡಿಸಲು ಕುರಿತು.

ಉಲ್ಲೇಖ:
1. ಮುಖ್ಯಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರ ಪತ್ರ ಸಂಖ್ಯೆ: ಮುಇಂ(ವಿ)/ಪ್ರವ/ಮೈ/ಅ.ಇಂ (ವಿ)/ಸ.ಕಾ.ನಿ.ಇಂ-1/ 18-19/ 8338-400 ದಿ:10.12.2018.
2. ಮುಖ್ಯಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ,ಬಾಗಲಕೋಟೆ ರವರ ಪತ್ರ ಸಂಖ್ಯೆ: ಮುಇಂ(ವಿ)/ಬಾಗಲಕೋಟೆ/ಪ್ರಸರಣ/ಅ.ಇಂ(ಕ)/ಸ.ಕಾ.ನಿ.ಇಂ-2/11788-90/ ದಿ:02.11.2018.
3. ನಿಗಮದ ಆದೇಶ ಸಂಖ್ಯೆ:ಬಿ19/7654/84-85 ದಿನಾಂಕ: 26.08.2009
4. ನಿರ್ದೇಶಕರು(ಪ್ರಸರಣ) ರವರು ಅನುಮೋದಿಸಿದ ಟಿಪ್ಪಣಿಯ ದಿನಾಂಕ:19.01.2019.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತೋಟಗಾರಿಕೆ/ಅರಣ್ಯ/ಕೃಷಿ ಬೆಳೆಗಳಿಗೆ ವಿವಿಧ ಹಂತಗಳಲ್ಲಿ ಪರಿಹಾರ ಮರು-ನಿಗದಿಪಡಿಸಲು ಮುಖ್ಯಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ರವರುಗಳು ಅನುಮೋದನೆಗಾಗಿ ಕೋರಿಕೆಗಳನ್ನು ಈ ಕಛೇರಿಗೆ ಸಲ್ಲಿಸುತ್ತಿದ್ದು, ಇದರಿಂದ ವಿವಿಧ ಹಂತಗಳಲ್ಲಿ ಪರಿಹಾರ ನೀಡುವುದು ವಿಳಂಬವಾಗುತ್ತಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ ಭೂಸ್ವಾಧೀನ ಮಾಡಿಕೊಳ್ಳುವ ಜಮೀನಿನಲ್ಲಿ ಬೆಳೆದಿರುವ ತೋಟಗಾರಿಕೆ ಬೆಳೆಗಳ ಮೌಲ್ಯ ಮಾಪನವನ್ನು ಸರ್ಕಾರದ ಮಾರ್ಗಸೂಚಿಯಂತೆ ಪರಿಷ್ಕರಿಸಿ ಹಾಗೂ ವಿದ್ಯುತ್ ಮಾರ್ಗಗಳ ಆವರಣದಲ್ಲಿ ಪರಿಷ್ಕೃತ ದರಗಳನ್ನು ನೀಡಲು ಪ್ರತಿ ಐದು (5) ವರ್ಷಗಳಿಗೊಮ್ಮೆ ಸರ್ಕಾರವು ಆದೇಶವನ್ನು ಹೊರಡಿಸುತ್ತಿದ್ದು ಸದರಿ ಆದೇಶಾನುಸಾರ ಕವಿಪ್ರನಿನಿ ವತಿಯಿಂದಲೂ ಆದೇಶಗಳನ್ನು ಕಾಲಕಾಲಕ್ಕೆ ಹೊರಡಿಸಲಾಗುತ್ತಿತ್ತು. ಆದರೆ 2008 ರ ನಂತರ ಯಾವುದೇ ಆದೇಶಗಳನ್ನು ಕವಿಪ್ರನಿನಿಯಲ್ಲಿ ಸ್ವೀಕರಿಸಿಲ್ಲವಾದ್ದರಿಂದ ಸ್ಥಳೀಯ ಮಟ್ಟದಲ್ಲಿ ಸರ್ಕಾರಿ ಸಂಸ್ಥೆಗಳಿಂದ ಪಡೆದ ಬೆಳೆಗಳ ದರ ಮತ್ತು ಇಳುವರಿ ಆದರಿಸಿ ಬೆಳೆ ಪರಿಹಾರವನ್ನು ನೀಡಲಾಗುತ್ತಿದೆ.

ಆದುದರಿಂದ, ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಕಾಮಗಾರಿಯ ಹಂತದಲ್ಲಿ ಹಾನಿಗೊಳಗಾಗಿರುವ/ತೆರವುಗೊಳಿಸುವ ಮರ/ಗಿಡ/ಬೆಳೆಗಳಿಗೆ ಪರಿಹಾರವನ್ನು, ಈಗಾಗಲೇ ಕಾರ್ಯಾರಂಭ ಹೊಂದಿರುವ ಕಾಮಗಾರಿಗಳನ್ನು ಮತ್ತು ಪರಿಹಾರ ಇತ್ಯರ್ಥಗೊಂಡ ಪ್ರಕರಣಗಳನ್ನು ಹೊರತುಪಡಿಸಿ ಸರ್ಕಾರವು ಕಾಲಕಾಲಕ್ಕೆ ಅಧಿಕೃತವಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಅನುಗುಣವಾದ ದರದಲ್ಲಿ **ತೋಟಗಾರಿಕೆ/ ಅರಣ್ಯ/ ಕೃಷಿ- ಬೆಳೆಗಳಿಗೆ** ಪರಿಹಾರ ನಿಗದಿಪಡಿಸಿ Manual of delegation of 2018 clauss 4.10 ಗೆ ಅನುಗುಣವಾಗಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

29/1/19

ಉಪ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ಕವಿಪ್ರನಿನಿ.

ಪ್ರತಿಗಳು:

1. ಎಲ್ಲಾ ಅಧೀಕ್ಷಕ ಇಂಜನಿಯರ್(ವಿ), ಕಾಮಗಾರಿ /ಕಾಮಗಾರಿ ಮತ್ತು ನಿರ್ವಹಣೆ, ಕವಿಪ್ರನಿನಿ.
2. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್(ವಿ), ಬೃಹತ್ ಕಾಮಗಾರಿ/ಟಿ ಎಲ್ ಅಂಡ್ ಎಸ್ಎಸ್ ವಿಭಾಗ ಕವಿಪ್ರನಿನಿ.
3. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಹಣಕಾಸು) /ನಿರ್ದೇಶಕರು(ಪ್ರಸರಣ) ರವರುಗಳ ಹಿರಿಯ ಅಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಅಧೀಕ್ಷಕ ಇಂಜನಿಯರ್(ವಿ)/ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ ರವರಿಗೆ ಸದರಿ ಪತ್ರವನ್ನು ನಿಗಮದ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.